XV ದಿನಾಂಕ ೨೬-೮-೮೬ರ ಪ್ರಶ್ನೆ ಸಂಖ್ಯೆ ೨೯೦ಕ್ಕೆ ನೀಡಿದ ಭರವಸೆಯನ್ನು ಜಾರಿ ಮಾಡದಿರುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ—— ಮಾನ್ಯ ಅಧ್ಯಕ್ಷರೇ ದಿನಾಂಕ ೨೬-೮-೮೬ರಂದು ಒಂದು ಪ್ರಶ್ನೆ ಸಂಖ್ಯೆ ೨೯೦ಕ್ಕೆ ಗೃಹ ಮಂತ್ರಿಗಳು ಭರವಸೆ ಕೊಟ್ಟಿದ್ದರೂ ಸಹ ಈ ಬಗ್ಗೆ ಸರಿಯಾದ ಕ್ರಮ ತೆಗೆದುಕೊಂಡಿಲ್ಲದಿರುವುದರ ಬಗ್ಗೆ ಮಾನ್ಯ ಗೃಹ ಮಂತ್ರಿಗಳಿಂದ ವಿವರಣೆ ಬಯಸುತ್ತೇನೆ.

ಶ್ರೀ ವೀರೇಂದ್ರ (ಗೃಹ ಮಂತ್ರಿಗಳ ಪರವಾಗಿ)- ೧೯೮೫ ಅಕ್ಟೋಬರ್ ತಿಂಗಳಿನಲ್ಲಿ ಹಾಗೂ ೧೯೮೬-೮೭ (ಮೇ ಅಂತ್ಯದವರೆಗೆ) ಹರಿಜನರ ಮೇಲೆ ಆದ ದೌರ್ಜನ್ಯಗಳ ಬಗೆಗಿನ ಅನುಕ್ರಮವಾಗಿ ೨೯೫ ಹಾಗೂ ೧೦೦ ಪ್ರಕರಣಗಳು ವರದಿಯಾದಂತೆಯೇ ನೊಂದಾಯಿಸಲಾಗಿ ಎಲ್ಲಾ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಮೊಕದ್ದಮೆಗಳು ಪೋಲಿಸರಿಂದ ನೊಂದಾಯಿಸಲಾಗಿ ಕ್ರಮವಾದ ತನಿಖೆಯನ್ನು ಮಾಡಿ ನ್ಯಾಯಾಲಯಗಳಿಗೆ ದೋಷಾರೋಪಣ ಪಟ್ಟಿಯನ್ನು ಕೊಡಲಾಗುತ್ತದೆ. ಕೆಳಗೆ ತೋರಿಸಿದ ಕಾರಣ ಗಳಿಂದಾಗಿ ಹೆಚ್ಚು ಸಂಖ್ಯೆಯಲ್ಲಿ ಈ ಪ್ರಕರಣಗಳು ಶಿಕ್ಷೆಯಲ್ಲಿ ಕೊನೆಗೊಳ್ಳುವುದಿಲ್ಲ.

೧. ಆರೋಪಣ ಪತ್ರ ದಾಖಲಾಗಿ ದೀರ್ಘವಾದ ಅವಧಿಯ ನಂತರ ನ್ಯಾಯಾಲಯದಲ್ಲಿ ವಿಚಾರಣೆಯನ್ನು ತೆಗೆದುಕೊಳ್ಳುವುದರಿಂದ ಫಿರ್ಯಾದಿ ಹಾಗೂ ಫಿರ್ಯಾದಿ ಪರ ಸಾಕ್ಷಿದಾರರು ಮೊಕದ್ದಮೆ ಬಗ್ಗೆ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ಹೀಗಾಗಿ ಅಭಿಯೋಕ್ತರಿಗೆ ಸರಿಯಾದ ಸಹಕಾರ ಸಿಗುವುದಿಲ್ಲ.

೨. ಹೆಚ್ಚಿನ ಸಮಯ ಸಾಕ್ಷಿದಾರರು ಕೆಲವೊಂದು ಕಾರಣದಿಂದ ಅಥವಾ ಊರ ಜನರ ಒತ್ತಡ ಕ್ಕಾಗಿ ಮೊಕದ್ದಮೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿಯುತ್ತಾರೆ.

೩. ಗ್ರಾಮಾಂತರ ಪ್ರದೇಶಗಳಲ್ಲಿ ನಡೆದ ಘಟನೆಯನ್ನು ಫಿರ್ಯಾದಿದಾರರು ಹಾಗೂ ಸಾಕ್ಷಿದಾರರು ಅದೇ ಊರಲ್ಲಿ ಅಪರಾಧಿಗಳ ಜೊತೆ ಸಹಬಾಳ್ವೆ ಮಾಡಿ ಅನೋನ್ಯವಾಗಿ ಬಾಳಿಬದುಕಬೇಕಾಗಿರುವುದರಿಂದ ಸಾಧ್ಯವೆಂದು ಭಾವಿಸಿ ಪಂಚಾಯ್ತಿಕೆಯಿಂದಾಗಿ ಮೊಕದ್ದಮೆಯಲ್ಲಿ ನಿರಾಸಕ್ತರಾಗುತ್ತಾರೆ. ಅಥವಾ ಆರೋಪಿಗಳ ಕೂಡ ರಾಜಿ ಮಾಡಿಕೊಳ್ಳುತ್ತಾರೆ. ಆದರೂ ಸರ್ಕಾರ ಇಂಥಹ ರಾಜಿ ಪಂಚಾಯ್ತಿಗೆ ಪ್ರೋತ್ಸಾಹಿಸುವುದಿಲ್ಲ. ಸರ್ಕಾರವು ದುರ್ಬಲ ವರ್ಗದ ಜನರ ಹಿತಾಸಕ್ತಿಗಳ ರಕ್ಷಣೆಯನ್ನು ಮಾಡಲು ಅಸಕ್ತವಾಗಿಲ್ಲವೆಂದು ಹೇಳುವುದು ಸರಿಯಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಂದ ಬಂದ ಎಲ್ಲಾ ದೂರುಗಳ ಬಗ್ಗೆ ಪೂರ್ಣ ಗಮನವನ್ನು ಕೊಟ್ಟು ಸೂಕ್ತ ಕ್ರಮ ಕೈಗೊಳ್ಳಲಾಗದೆವುದಲ್ಲದೆ, ಪೋಲೀಸರು ಸ್ವಯಂ ಪ್ರೇರಣೆಯಿಂದಲೇ ಮೊಕದ್ದಮೆಗಳನ್ನು ದಾಖಲು ಮಾಡಿಕೊಳ್ಳುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಎಲ್ಲಾ ರೀತಿಯ ಸಂರಕ್ಷಣೆಯನ್ನು ಕೊಡಲಾಗಿದ್ದು ಅವಶ್ಯ ಸಂದರ್ಭಗಳಲ್ಲಿ ಈ ಜನರ ಮೇಲೆ ದೌರ್ಜನ್ಯಗಳು ನಡೆಯದಂತೆ ದಂಡ ಪ್ರಕ್ರಿಯೆ ಸಂಹಿತೆ ಅನ್ವಯ ಕ್ರಮಗಳನ್ನು ತೆಗೆದುಕೊಂಡಾಗಿದೆ ಹೀಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಜನರ ಮನೋಧೈರ್ಯವನ್ನು ಹೆಚ್ಚಿಸುವುದಕ್ಕೋಸ್ಕರ ಪೋಲೀಸರೇ ಸ್ವಯಂ ಪ್ರೇರಣೆಯಿಂದ ಮೊಕದ್ದಮೆಗಳನ್ನು ದಾಖಲು ಮಾಡಿಕೊಂಡುದರ ಪರಿಣಾಮವಾಗಿ ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆಯ ಪ್ರಕರಣಗಳು ಹೆಚ್ಚಾಗಿ ೧೦೬ಕ್ಕೆ ಆಗಿವೆ. ಇವುಗಳಲ್ಲಿ ೨ ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ. ಪೋಲೀಸರು ಪರಿಜನ ಕೇರಿಗಳಿಗೆ ಭೇಟಿ ನೀಡಿ ಅವರ ಕುಂದುಕೊರತೆಗಳನ್ನು ನಿವಾರಿಸುವುದಲ್ಲದೆ ಅವರ ಅಧಿಕಾರ ಹಾಗೂ ಸೌಲಭ್ಯಗಳ ಬಗ್ಗೆ ತಿಳುವಳಿಕೆ ಕೊಡುತ್ತಿದ್ದಾರೆ. ಇದರಿಂದಾಗಿ ಆ ಜನರಲ್ಲಿ ಧೈರ್ಯ ಹಾಗೂ ಜಾಗೃತಿಯುಂಟಾಗಿದೆ.

ವರದಿಯಾದ ಯಾವುದೊಂದು ಪ್ರಕರಣವು ನೊಂದಾಯಿಸದೆ ಉಳಿದಿದೆಯೆಂಬ ಆರೋಪವು ನಿಜವಾಗಿಲ್ಲ. ಸಂಬಂಧಪಟ್ಟ ಪೋಲೀಸರು ಉತ್ಪ್ರೇಕ್ಷೆಯಿಂದು ಕಂಡು ಬಂದಂತಹ ಪ್ರಕರಣಗಳಲ್ಲೂ ದೊಡ್ಡ ಮೊಕದ್ದಮೆಯನ್ನು ನೊಂದಾಯಿಸಿಕೊಂಡಿದ್ದಾರೆ. ಹಾಗಾಗಿ ಯಾವುದೇ ಪ್ರಕರಣವನ್ನು ಕೈಬಿಡಲು ಸಾಧ್ಯವಾಗಿಲ್ಲ. ಮುಂದೆ ವರದಿಯಾದ ಸಂಜ್ಞೇಯ (ಕಾಗ್ನಿಸಬಲ್) ಪ್ರಕರಣವನ್ನು ಪೋಲೀಸರು ನೊಂದಾಯಿಸಿಲ್ಲ ಎಂಬ ಬಗ್ಗೆ ಯಾವ ದೂರೂ ಬಂದಿಲ್ಲ. ದೌರ್ಜನ್ಯಕ್ಕೊಳಗಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಎಲ್ಲಾ ಜನರಿಗೆ ಸರ್ಕಾರದ ವತಿಯಿಂದ ತಪ್ಪದೇ ಪರಿಹಾರ ಧನವನ್ನು ನೀಡಲಾಗುತ್ತಿದೆ.